**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.543/2017**

**ಪಿ.ಡಬ್ಲ್ಯೂ: 02**

**ಸಿ.ಡಬ್ಲ್ಯೂ: 02**

| | | |
|---|---|---|
| **ಹೆಸರು** | : | ಚಂದ್ರಮ್ಮ |
| ಗಂಡನ **ಹೆಸರು** | : | ಗಂಗಾಧರಪ್ಪ |
| **ವಯಸ್ಸು** | : | 55 ವರ್ಷ |
| **ಉದ್ಯೋಗ** | : | ಮನೆ ಕೆಲಸ |
| **ವಾಸಸ್ಥಳ** | : | ಬಾವಿಕೆರೆ, ಲಕ್ಕವಳ್ಳಿ |

**ದಿನಾಂಕ: 11-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಚಾಸಾ-1 ನನ್ನ ಗಂಡ. ಚಾಸಾ-3 ನನ್ನ ಮಗ. ಆರೋಪಿತರು ಚಾಸಾ-1 ರವರ ಅಕ್ಕನ ಮಕ್ಕಳು. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ರಾತ್ರಿ ಸುಮಾರು 10-30 ರಿಂದ 10-45 ಗಂಟೆಯೊಳಗೆ ನಾನು, ಚಾಸಾ-1, 3 ರವರು ಹಾಗೂ 3, 4 ಜನ ನೆಂಟರು ಮನೆಯಲ್ಲಿದ್ದೆವು. ನಮ್ಮ ಮನೆಗೆ ಬಂದವರ ಪೈಕಿ ನಿಂಗಪ್ಪ ಎಂಬುವವರು ಚಾಸಾ-1 ರವರಿಗೆ ಅಡಿಕೆ ಪೊಟ್ಟಣವನ್ನು ಕೇಳಿದರು. ಅಡಿಕೆ ಪೊಟ್ಟಣ ಕೊಡಿಸುವ ಸಲುವಾಗಿ ಅಂಗಡಿಗೆ ಸದರಿ ನಿಂಗಪ್ಪನನ್ನು ಕರೆದುಕೊಂಡು ಹೋದರು. ನಾನು ಅಡಿಗೆ ಮಾಡುತ್ತಿದ್ದೆ. ನನ್ನ ಮಗ ಚಾಸಾ-3 ರವರು ದೇವರ ಪೂಜೆ ಮಾಡುತ್ತಿದ್ದರು. ನನ್ನ ಗಂಡ ಚಾಸಾ-1 ರವರ ಅಂಗಡಿಯಿಂದ ಮನೆಗೆ ಬರುವಾಗ ಆರೋಪಿತರು ಕೈಯಿಂದ ಮೈಕೈಗೆ ಹೊಡೆದರು. ನಾವು ಗಲಾಟೆಯ ಸದ್ದನ್ನು ಕೇಳಿ ಹೋಗಿ ನೋಡಿದಾಗ ನಾನು ಹಾಗೂ ಚಾಸಾ-3 ರವರು ಗಲಾಟೆ ಬಿಡಿಸಲು ಹೋದಾಗ ನನಗೆ 2 ನೇ ಆರೋಪಿ ಮುಖಕ್ಕೆ, ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಬೆನ್ನಿಗೆ ಹೊಡೆದಿರುತ್ತಾರೆ. 1 ನೇ ಆರೋಪಿ ಚಾಸಾ-3 ರವರಿಗೆ ದೊಣ್ಣೆಯಿಂದ ಮೈಕೈಗೆ ಹೊಡೆದಿರುತ್ತಾರೆ. ಕುಡುಗೋಲಿನಿಂದ ಎಲ್ಲಾ ಆರೋಪಿತರು ಚಾಸಾ-1 ರವರಿಗೆ ಮೈಕೈಗೆ ಹೊಡೆದು ರಕ್ತಗಾಯವಾಗಿರುತ್ತದೆ. ಉಳಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ.

ಪೋಲೀಸ್ ಠಾಣೆಗೆ ಹೋದೆವು. ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಘಟನೆ ಕುರಿತು ನಾನು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಎಂಒ-*1* ಮತ್ತು *2* ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮೂರು ದಿನಗಳ ನಂತರ ಪೋಲೀಸರು ನಮ್ಮ ಮನೆಯ ಹತ್ತಿರ ಸ್ಥಳ ಮಹಜರ್ ಮಾಡಿ ಎಂಒ-*1* ಮತ್ತು *2* ನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಪೋಲೀಸ್ ಠಾಣೆಗೆ ಚಾಸಾ-*1* ರವರ ರಕ್ತವಾದ ಶರ್ಟ, ಪಂಚೆಯನ್ನು ನಾನು ಹಾಜರುಪಡಿಸಿದ್ದು, ಪೋಲೀಸರು ಪೋಲೀಸ್ ಠಾಣೆಯಲ್ಲಿ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸ್ಥಳ ಮತ್ತು ಅಮಾನತ್ತು ಮಹಜರಿನಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-*2* ಮತ್ತು *3* ಎಂದು, ಸಹಿಗಳನ್ನು ನಿಪಿ-*2*(ಎ) ಮತ್ತು ನಿಪಿ-*3*(ಎ) ಎಂದು ಗುರುತಿಸಲಾಯ್ತು. ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-*4* ಮತ್ತು *5* ಎಂದು ಗುರುತಿಸಲಾಯ್ತು. ಕಲಂ *164* ರಡಿ ನೀಡಿದ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-*6* ಎಂದು, ಸಹಿಯನ್ನು ನಿಪಿ-*6*(ಎ), (ಬಿ) ಎಂದು ಗುರುತಿಸಲಾಯ್ತು. ನ್ಯಾಯಾಲಯದ ಮುಂದಿರುವ ಶರ್ಟ ಹಾಗೂ ಪಂಚೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಎಂಒ-*3* ಮತ್ತು *4* ಎಂದು ಗುರುತಿಸಲಾಯ್ತು.

***(ಈ ಹಂತದಲ್ಲಿ ಸಾಕ್ಷಿಯನ್ನು*** ಭಾಗಶಃ ***ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

***ಪಾಟೀ ಸವಾಲುಃ ಸ.ಸ.ಅ. ರವರಿಂದ.***

ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

***ಪಾಟೀ ಸವಾಲು ಃ ಆರೋಪಿತರ ಪರ*** ಶ್ರೀ ಟಿ ಆರ್ ಎಸ್ ***ವಕೀಲರಿಂದ.***

ನಾವು *4, 5* ಕುರಿಗಳನ್ನು ಸಾಕಿರುತ್ತೇವೆ. ಘಟನೆ ನಡೆದ ಸ್ಥಳಕ್ಕೂ ನಮ್ಮ ಮನೆಗೂ ಸುಮಾರು *30* ರಿಂದ *40* ಮೀಟರ್ ಅಂತರವಿದೆ. ಘಟನಾ ಸ್ಥಳದಲ್ಲಿ ಕತ್ತಲಿತ್ತು ಎಂದರೆ ಸಾಕ್ಷಿಯು ಅಲ್ಲಿ ಲೈಟುಗಳು ಇದ್ದವೆಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಇನ್ನೂ ಜಗಳ ನಡೆಯುತ್ತಿತ್ತು. ನಮ್ಮ ನೆಂಟರಾದ ನಿಂಗಪ್ಪನವರು ಜಗಳವನ್ನು ನೋಡಿರುತ್ತಾರೆ. ಜಗಳವನ್ನು ನಮ್ಮ ಅಕ್ಕಪಕ್ಕದ ಮನೆಯ ಜನರು ನೋಡಿರುತ್ತಾರೆ. ಜಗಳವನ್ನು ಜನರು ಬಿಡಿಸಿರುವ ಬಗ್ಗೆ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನನ್ನ ಗಂಡ

ಚಾಸಾ-*1* ರವರಿಗೆ ಮದ್ಯಪಾನದ ಅಭ್ಯಾಸ ಇರುತ್ತದೆಂದರೆ ಸರಿಯಲ್ಲ. ನಾನು, ಚಾಸಾ-*1*, ನನ್ನ ಮಗ ಚಾಸಾ-*3* ರವರು ಸೇರಿ ಎಲ್ಲಾ ಆರೋಪಿತರಿಗೆ ಹೊಡೆದಿರುತ್ತೇವೆಂದರೆ ಸರಿಯಲ್ಲ. ಆರೋಪಿತರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆಂದರೆ ಸರಿ. ಆರೋಪಿತರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ಆರೋಪಿತರು ಹೋಗಿ ಚಿಕಿತ್ಸೆ ಪಡೆದು ಪೋಲೀಸರಿಗೆ ಕಂಪ್ಲೆಂಟ್ ನೀಡಿದ್ದರಿಂದ ನಾವು ಹೋಗಿ ಕಂಪ್ಲೆಂಟ್ ಕೊಟ್ಟಿರುತ್ತೇವೆಂದರೆ ಸಾಕ್ಷಿಯು ನಾವೇ ಮೊದಲು ಹೋಗಿ ದೂರು ನೀಡಿರುತ್ತೇವೆಂದು ನುಡಿಯುತ್ತಾರೆ. ನಾವು ಪೋಲಿಸ್ ಠಾಣೆಗೆ ದೂರು ನೀಡಿದ ಸಮಯ ನೆನಪಿಲ್ಲ. ನಾನು ದೂರು ನೀಡಲು ಹೋಗಿರುವುದಿಲ್ಲ. ಗಲಾಟೆ ಎಷ್ಟು ಹೊತ್ತು ನಡೆಯಿತೆಂಬ ಬಗ್ಗೆ ನನಗೆ ಹೇಳಲಾಗುವುದಿಲ್ಲ.

ನಾನು ಚಾಸಾ-*1*, *3* ರವರೇ ಆರೋಪಿತರಿಗೆ ಹೊಡೆದಿರುತ್ತೇವೆಂದರೆ ಸಾಕ್ಷಿಯು ಅವರು *6* ಜನರಿದ್ದು, ನಾವು *3* ಜನರಿದ್ದು, ಹೇಗೆ ಹೊಡೆಯಲು ಸಾಧ್ಯವೆಂದು ನುಡಿಯುತ್ತಾರೆ. ಚಾಸಾ-*5*, *1*, *3* ಹಾಗೂ ನಾನು ಸೇರಿ ಆರೋಪಿತರಿಗೆ ಚರಂಡಿಯಲ್ಲಿ ಹಾಕಿ ತುಳಿದು ಹೊಡೆದಿರುತ್ತೇವೆಂದರೆ ಸರಿಯಲ್ಲ. ನನ್ನ ಚಾಸಾ-*1* ರವರು *1* ಮತ್ತು *2* ನೇ ಆರೋಪಿತರು ತನಗೆ ಹೊಡೆದರೆಂದು ನನಗೆ ತಿಳಿಸಿದರು. ನನ್ನ ಗಂಡ ಚಾಸಾ-*1* ರವರು ದೊಣ್ಣೆಯಿಂದ ಯಾರು ಹೊಡೆದರು ಹಾಗೂ ಕುಡುಗೋಲಿನಿಂದ ಯಾರು ಹೊಡೆದರು ಎನ್ನುವ ಬಗ್ಗೆ ನನಗೆ ಹೇಳಿಲ್ಲ. ಚಾಸಾ-*5* ರವರು ನಮ್ಮ ಮನೆಯ ಹಿಂದಿನ ಬೀದಿಯಲ್ಲಿ ವಾಸವಾಗಿರುತ್ತಾರೆ. ಚಾಸಾ-*6* ರವರು ರಂಗೇನಹಳ್ಳಿಯವರಾಗಿದ್ದು, ಗಲಾಟೆ ನಡೆಯುವಾಗ ಹಾಜರಿದ್ದರು. ಚಾಸಾ-*5*, *6* ರವರು ನನ್ನ ಗಂಡ ಚಾಸಾ-*1* ರವರಿಗೆ ಪರಿಚಯವಿರುತ್ತಾರೆ. ನಾವು ಅಕ್ಕಪಕ್ಕದ ಮನೆಯವರ ಜೊತೆ ಅನ್ಯೋನ್ಯವಾಗಿದ್ದೇವೆ.

ಕುಡುಗೋಲನ್ನು ಘಟನೆ ಸಮಯದಲ್ಲಿ ಯಾರು ಹಿಡಿದಿದ್ದರೆಂದು ನನಗೆ ಹೇಳಲಾಗುವುದಿಲ್ಲ. ನಮ್ಮ ಹಾಗೂ ಆರೋಪಿತರ ಮನೆಯ ಅಂತರ *40* ರಿಂದ *50* ಅಡಿ ಇರುತ್ತದೆ. ನಾವೇ ಆರೋಪಿತರನ್ನು ಹೊಡೆದು ಕೆಳಕ್ಕೆ ಹಾಕಿ ತುಳಿದಿದ್ದು, ಆರೋಪಿತರು ನಮ್ಮನ್ನು ಹೊಡೆದರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮು.ಮಾ.*1* ಮತ್ತು *2* ನ್ನು ಇದೇ ಮೊದಲು ನೋಡುತ್ತಿದ್ದೇನೆಂದರೆ ಸರಿಯಲ್ಲ. ಬಟ್ಟೆಗಳನ್ನು ಘಟನೆಯ ದಿನ ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ, *3*, *4* ದಿನಗಳ ನಂತರ ವಶಪಡಿಸಿಕೊಂಡಿರುತ್ತಾರೆ. ಸದರಿ ಬಟ್ಟೆಯು ಆಸ್ಪತ್ರೆಯಲ್ಲಿದ್ದು, ಆಸ್ಪತ್ರೆಯಿಂದ ನಾವು ಬಟ್ಟೆಯನ್ನು

ಪಡೆದು ಪೋಲೀಸರಿಗೆ ನೀಡಿರುತ್ತೇವೆ. ಸದರಿ ಬಟ್ಟೆಯು ಚಾಸಾ-*1* ರವರ ಬಟ್ಟೆಯಲ್ಲ ಎಂದರೆ ಸರಿಯಲ್ಲ. ಸಿಮೆಂಟ್ ಕಲರ್ ಶರ್ಟ್ ಹಾಗೂ ಚೆಕ್ಸ್ ಕಲರ್ ಪಂಚೆಗಳಾಗಿರುತ್ತದೆ. ಮು ಮಾ *1* ಮತ್ತು *2* ನ್ನು ಪೋಲೀಸರು ಎಲ್ಲಿಂದ ವಶಪಡಿಸಿಕೊಂಡರೆಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-*1* ರವರನ್ನು ಹೊಡೆದಿರುವುದಿಲ್ಲ, ನಾವೇ ಆರೋಪಿತರನ್ನು ಹೊಡೆದು ಅವರು ದೂರು ನಮ್ಮ ಮೇಲೆ ಕೊಟ್ಟಿದ್ದಕ್ಕಾಗಿ ನಾವು ಅವರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇವೆಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ಚಾಸಾ-*1* ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***<u>ಮರುವಿಚಾರಣೆ</u>: ಇರುವುದಿಲ್ಲ.***

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***